**Spl.C.(Corruption)/5002/2015**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 12

**ಪಿ ಡಬ್ಲೂಃ** 8

| | |
|---|---|
| ಸಾಕ್ಷಿಯ ಹೆಸರು - | ಕನಕಪ್ಪ |
| ತಂದೆಯ ಹೆಸರು - | ಗವಿಸಿದ್ಧಪ್ಪ |
| ವಯಸ್ಸು - | 45 ವರ್ಷ |
| ಉದ್ಯೋಗ - | ಖಾಸಗಿ ಕೆಲಸ |
| ವಾಸಸ್ಥಳ - | ಹೊಸಪೇಟೆ |

**ಸಾಕ್ಷಿಯನ್ನು ದಿನಾಂಕಃ** 28-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ**

ಈಗ್ಗೆ 12 ವರ್ಷದ ಹಿಂದೆ ನಾನು ಹೊಸಪೇಟೆಯ ಸಂಡೂರು ರಸ್ತೆಯಲ್ಲಿ ಜಂಬುನಾಥ ಹೋಟೆಲ್ ನಡೆಸುತ್ತಿದ್ದು, ಸಂಜೆ 07.30 ರ ಸಮಯದಲ್ಲಿ ಆರೋಪಿ ನಮ್ಮ ಹೋಟೆಲ್ ಗೆ ಬಂದು ಟೀ ಕುಡಿಯುತ್ತಿದ್ದ. ಆ ಸಮಯದಲ್ಲಿ ಲೋಕಾಯುಕ್ತ ಪೋಲಿಸರು ದಾಳಿ ಮಾಡಿ ಆತನನ್ನು ವಶಕ್ಕೆ ಪಡೆದರು. ಆರೋಪಿ ರೂ. 600/- ಲಂಚಕ್ಕೆ ಬೇಡಿಕೆ ಇಟ್ಟು ಅದರ ಬದಲಿಗೆ ಮೊಬೈಲ್ ನ್ನು ಅಡಮಾನ ಇಟ್ಟುಕೊಂಡಿದ್ದಾಗಿ ತಿಳಿಸಿದರು. ಬೇರೆ ವಿಚಾರ ನನಗೆ ಗೊತ್ತಿಲ್ಲ. ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು ಬಿ ಆರ್., ವಕೀಲರಿಂದಃ ಇಲ್ಲಾ.**

ನಾನು ಹೇಳಿದಂತೆ ಯಾವುದೇ ಘಟನೆ ನಡೆಯದಿದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನದು ಚಿಕ್ಕ ಹೋಟೆಲ್ ಅಂದರೆ ಸರಿ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.